ಪೂರ್ಣಗೊಂಡ ನಂತರ ಕಾರ್ಯರೂಪಕ್ಕೆ ತರಲಾಗುವುದು. ಈ ಪಟ್ಟಿಯಲ್ಲಿ ಗುಬ್ಬಿ ತಾಲ್ಲೂಕು ಸೇರ್ಪಡೆಯಾಗಿರುತ್ತದೆ.

೨೦೦೫-೦೬ನೇ ಸಾಲಿನಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ ರೂ.೨೫.೦೦ ಕೋಟಿ ಅನುದಾನವನ್ನು ಸರ್ಕಾರವು ಹಂಚಿಗೆ ಮಾಡಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ : ಸಿಐ ೧೨೫ ಸಿಎಸ್‌ಇ ೨೦೦೫ ದಿನಾಂಕ ೧೮-೪-೨೦೦೫ ರಲ್ಲಿ ಕಾರ್ಯಕ್ರಮದ ಅನುಷ್ಠಾನ ಮತ್ತು ಮೇಲ್ವಿಚಾರಣೆಗಾಗಿ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಕಾರ್ಯಪಡೆಯನ್ನು ರಚಿಸಲಾಗಿದೆ.

ಇ) ಅನ್ವಯಿಸುವುದಿಲ್ಲ.

೩೯೨೦ (೪೭೫೫) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ) :- ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳನ್ನೊಳಗೊಂಡ ಹಾಲು ಉತ್ಪಾದಕರ ಸಂಯೋಜನೆಗೆ ದಕ್ಷಿಣ ಕನ್ನಡ ಹಾಲು ಉತ್ಪಾದಕರ ಒಕ್ಕೂಟ ಕಾರ್ಯಾಚರಣೆ ಮಾಡುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಜಿಲ್ಲೆಗಳಲ್ಲಿ ಹೈನುಗಾರಿಕೆಗೆ ಉತ್ತೇಜನ ನೀಡುವರೇ; ಪಶು ಆಹಾರ ಘಟಕವಿಲ್ಲದೇ ತೊಂದರೆಯಾಗಿರುವುದು ನಿಜವೇ;

ಇ) ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಪಶು ಆಹಾರ ಘಟಕ ಸ್ಥಾಪನೆಗೆ ಕೋರಿಕೆ ಬಂದಿದೆಯೇ ; ಬಂದಿದ್ದಲ್ಲಿ ಸರ್ಕಾರ ಅನುಮತಿ ನೀಡಿರುವುದೇ;

ಈ) ಪ್ರತಿ ತಿಂಗಳು ಈ ಜಿಲ್ಲೆಗೆ ೩೦೦೦ ಮೆಟ್ರಿಕ್ ಟನ್ ಆಹಾರ ಬೇಡಿಕೆ ಇದ್ದು ಸಾಕಷ್ಟು ಪೂರೈಕೆಯಾಗುತ್ತಿಲ್ಲವಾದ ಕಾರಣ ಅಷ್ಟು ಪ್ರಮಾಣದ ಪಶು ಆಹಾರ ಸರಬರಾಜು ಮಾಡಲು ಯಾವ ಕ್ರಮ ಕೈಗೊಳ್ಳಲಾಗಿರುವುದು;

ಉ) ಮೇಲಿನ ಪಶು ಆಹಾರ ಘಟಕ ಸ್ಥಾಪನೆಗೆ ಸರ್ಕಾರ ಇದುವರೆಗೆ ಕೈಗೊಂಡ ಕ್ರಮಗಳೇನು?

ಶ್ರೀ ಮೆರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು) :

ಅ) –ಬಂದಿದೆ–

ಆ) ಕರ್ನಾಟಕ ಹಾಲು ಮಹಾಮಂಡಳಿಗೆ ಸಂಯೋಜನೆಗೊಂಡಿರುವ ಎಲ್ಲಾ ಹಾಲು ಒಕ್ಕೂಟಗಳಿಗೆ ನೀಡುತ್ತಿರುವ ಉತ್ತೇಜನವನ್ನು ಈ ಜಿಲ್ಲೆಗಳ ಹೈನುಗಾರರಿಗೂ ಸಹ ನೀಡಲಾಗುತ್ತಿದೆ. ಪಶು ಆಹಾರದ ಬೇಡಿಕೆಯನ್ನು ಕಹಾಮ ಹೊಂದಿರುವ ನಾಲ್ಕು ಪಶು ಆಹಾರ ಘಟಕಗಳಿಂದ ಪೂರೈಸಲಾಗುತ್ತಿದೆ ಮತ್ತು ಕರ್ನಾಟಕ ಆಗ್ರೋಕಾರ್ನ್ ಸಂಸ್ಥೆಯಿಂದ ಜಾಬ್ ವರ್ಕ್ ಆಧಾರದ ಮೇಲೆ ಪಶು ಆಹಾರವನ್ನು ತಯಾರಿಸಿ ಪೂರೈಸಲಾಗುತ್ತಿದೆ. ಜೊತೆಗೆ ಹಾಸನ ಪಶು ಆಹಾರ ಘಟಕವನ್ನು ೧೦೦ ಮೆಟ್ರಿಕ್ ಟನ್ ಸಾಮರ್ಥ್ಯದಿಂದ ೨೦೦ ಮೆಟ್ರಿಕ್ ಟನ್ ಸಾಮರ್ಥ್ಯಕ್ಕೆ ವಿಸ್ತರಿಸಲಾಗುತ್ತಿದೆ.

ಇ) ಕರ್ನಾಟಕ ಹಾಲು ಮಹಾಮಂಡಳಿಯ ವ್ಯಾಪ್ತಿಯಲ್ಲಿ ೪ ಪಶು ಆಹಾರ ಘಟಕಗಳು ಕಾರ್ಯ ನಿರ್ವಹಿಸುತ್ತಿದ್ದು, ಏಪ್ರಿಲ್ ೨೦೦೪ ರಿಂದ ಜನವರಿ ೨೦೦೫ರ ಅಂತ್ಯಕ್ಕೆ ಸರಾಸರಿ ಪ್ರತಿ ತಿಂಗಳಿಗೆ ೧೨.೭೬ ಮೆಟ್ರಿಕ್ ಟನ್ ಪಶು ಆಹಾರವನ್ನು ಉತ್ಪಾದನೆ ಮಾಡಲಾಗಿರುತ್ತದೆ. ಹಾಲು ಒಕ್ಕೂಟಗಳ ಬೇಡಿಕೆಗನುಗುಣವಾಗಿ ಹಾಸನ ಪಶು ಆಹಾರ ಕಾರ್ಖಾನೆಯ ಸಾಮರ್ಥ್ಯವನ್ನು ಈಗಿರುವ ೧೦೦ ಮೆಟ್ರಿಕ್ ಟನ್ನಿನಿಂದ ೨೦೦ ಮೆಟ್ರಿಕ್ ಟನ್ನಿಗೆ ಹಾಗೂ ಗುಬ್ಬಿ ಪಶು ಆಹಾರ ಕಾರ್ಖಾನೆಯ ಸಾಮರ್ಥ್ಯವನ್ನು ೧೦೦ ಮೆಟ್ರಿಕ್ ಟನ್ನಿನಿಂದ ೧೫೦ ಮೆಟ್ರಿಕ್ ಟನ್ನಿಗೆ ಹೆಚ್ಚಿಸಲು ಈಗಾಗಲೇ ಕ್ರಮಕೈಗೊಳ್ಳಲಾಗಿದೆ. ಕಾಮಗಾರಿ ಕೆಲಸ ಪ್ರಗತಿಯಲ್ಲಿರುತ್ತದೆ. ಬೆಂಗಳೂರು ನಗರದ ಸುತ್ತಮುತ್ತಲಿನಲ್ಲಿ ಹೊಸದಾಗಿ ಪಶು ಆಹಾರ ಘಟಕ ಸ್ಥಾಪಿಸಲು ಸಮೀಕ್ಷೆ ನಡೆಸಲು ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯವರನ್ನು ಕರ್ನಾಟಕ ಹಾಲು ಮಹಾಮಂಡಳಿ ವತಿಯಿಂದ ಕೋರಲಾಗಿದೆ. ಆದರೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪಶು ಆಹಾರ ಘಟಕ ಸ್ಥಾಪಿಸುವ ಉದ್ದೇಶ ಕರ್ನಾಟಕ ಹಾಲು ಮಹಾಮಂಡಳಿಯ ಯೋಜನೆಯಲ್ಲಿ ಇರುವುದಿಲ್ಲ. ಕಾರಣ ಹಾಸನ ಪಶು ಆಹಾರ ಘಟಕದಿಂದ ಪೂರೈಸಲಾಗುವುದು.

ಈ) ೩೦೦೦ ಮೆಟ್ರಿಕ್ ಟನ್ನಿಗೂ ಮೀರಿ ಪಶು ಆಹಾರ ಸರಬರಾಜು ಮಾಡಲಾಗುತ್ತಿದೆ. ೨೦೦೫ರ ಮೇ ತಿಂಗಳಲ್ಲಿ ೩೫೬೭ ಮೆಟ್ರಿಕ್ ಟನ್ ಸರಬರಾಜು ಮಾಡಲಾಗಿದೆ.

ಉ) ಹಾಸನ ಪಶು ಆಹಾರ ಘಟಕವನ್ನು ವಿಸ್ತರಿಸಲು ಕ್ರಮ ತೆಗೆದುಕೊಂಡಿರುವುದರಿಂದ ಪ್ರತ್ಯೇಕ ಘಟಕ ಸ್ಥಾಪನೆಯ ಅಗತ್ಯತೆಯಿರುವುದಿಲ್ಲ.

೩೯೨೧ (೪೩೮೪೪) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಹಿಂದುಳಿದ ಜಾತಿ–ಜನಾಂಗಗಳ ಸ್ಥಿತಿಗತಿ ಕುರಿತು ಸಮೀಕ್ಷಾ ವರದಿಯನ್ನು ನೀಡಲು ಸರ್ಕಾರ ಪ್ರತ್ಯೇಕ ಆಯೋಗ ರಚಿಸಿದೆಯೇ; ಅಥವಾ ಹಾಲಿ ಇರುವ ಹಿಂದುಳಿದ ವರ್ಗಗಳ ಆಯೋಗಕ್ಕೆ ಕೋರಿದೆಯೇ;

ಆ) ಇದಕ್ಕಾಗಿ ಸರ್ಕಾರಿ ನಿಗದಿಪಡಿಸಿರುವ ಹಣಕಾಸು ನೆರವು ಎಷ್ಟು ; ಈಗಾಗಲೇ ಎಷ್ಟು ಹಣ ಮಂಜೂರು ಮಾಡಿ ಬಿಡುಗಡೆಗೊಳಿಸಲಾಗಿದೆ; (ವಿವರ ಒದಗಿಸುವುದು);

ಇ) ಈ ಯೋಜನಾ ಸಮೀಕ್ಷಾ ವರದಿಗಾಗಿ ತಗಲುವ ವೆಚ್ಚ ಎಷ್ಟು ; ಯಾವಾಗಿನಿಂದ ಈ ಕಾರ್ಯವನ್ನು ಅನುಷ್ಠಾನಗೊಳಿಸಲಾಗಿದೆ; ಇದಕ್ಕೆ ನಿಗದಿಪಡಿಸಿರುವ ಸಮಯ ಎಷ್ಟು;

ಈ) ಈಗಾಗಲೇ ಸಮೀಕ್ಷಾ ಕಾರ್ಯವನ್ನು ಆಯೋಗವು ನಡೆಸುತ್ತಿದೆಯೇ; ಹಾಗಿದ್ದಲ್ಲಿ ಯಾವ ಹಂತದಲ್ಲಿದೆ; ಪ್ರಸ್ತುತ ಯಾವ ಯಾವ ಜಿಲ್ಲೆಗಳಲ್ಲಿ ಈ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ;

ಉ) ಆಯೋಗದ ಸಮೀಕ್ಷಾವರದಿಯನ್ನು ಪೂರ್ಣಗೊಳಿಸಲು ಬೇಕಾಗಿರುವ ಸಮಯವೆಷ್ಟು;

ಊ) ಈ ಹೆಚ್ಚುವರಿ ಕೆಲಸದಿಂದಾಗಿ, ಆಯೋಗದ ದಿನ ನಿತ್ಯದ ಇನ್ನಿತರೆ ಕಾರ್ಯಚಟುವಟಿಕೆಗಳಿಗೆ ಅನಗತ್ಯ ತೊಂದರೆ, ವಿಳಂಬ ನೀತಿ ಉಂಟಾಗುವುದಿಲ್ಲವೇ?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಇಲ್ಲ, ಹಾಲಿ ಇರುವ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದಲೇ ಸಮೀಕ್ಷಾ ಕಾರ್ಯವನ್ನು ಕೈಗೊಳ್ಳಲಾಗುತ್ತದೆ.

ಆ) ಸರ್ಕಾರವು ಈ ಉದ್ದೇಶಕ್ಕಾಗಿ ೨೦೦೪–೦೫ ನೇ ಸಾಲಿನಲ್ಲಿ ರೂ.೧.೦೦ ಲಕ್ಷಗಳ ಆಯವ್ಯಯವನ್ನು ಒದಗಿಸಿ ಬಿಡುಗಡೆ ಮಾಡಿರುತ್ತದೆ. ಇದಲ್ಲದೆ ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರಕ್ಕೆ ರೂ.೨೧.೦೫ ಲಕ್ಷಗಳನ್ನು ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುತ್ತವೆ.